ರಾಜ್ಯದಲ್ಲಿ ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸಲು ಪರವಾನಿಗೆಯನ್ನು ನೀಡುವ ಬಗ್ಗೆ.

೧೬೪೧ ಶ್ರೀ ಡಿ. ಎ. ಚಿನ್ನಪ್ಪ(ಮಡಿಕೇರಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸಲು ಪರವಾನಿಗೆಯನ್ನು ನೀಡಿರುವುದು ನಿಜವೇ ?

ಆ) ಹಾಗಿದ್ದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆ ಉದ್ದಿಮೆದಾರರಿಗೆ ನೀಡಿರುವ ಲೈಸನ್ಸ್‌ಗಳ ಸಂಖ್ಯೆ ಎಷ್ಟು ?

ಇ) ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ನೀಡಿರುವ ಲೈಸೆನ್ಸ್‌ಗಳೆಷ್ಟು ?

ಈ) ಈ ಎರಡು ವರ್ಗಗಳಲ್ಲಿ ಲೈಸೆನ್ಸ್ ಪಡೆದಿರುವ ಕೈಗಾರಿಕಾ ಉದ್ದಿಮೆದಾರರ ಹೆಸರುಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು).—

ಅ) ಮಧ್ಯಮ ಮತ್ತು ದೊಡ್ಡ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಪರವಾನಿಗೆಯನ್ನು ಕೇಂದ್ರ ಸರ್ಕಾರದವರು ನೀಡುತ್ತಾರೆ.

ಆ) ಸಾಮಾನ್ಯವಾಗಿ ಪರವಾನಿಗೆಗಳನ್ನು ಉದ್ಯಮ ಕಂಪನಿಗಳ ಹೆಸರಿನಲ್ಲಿ ನೀಡಲಾಗುತ್ತಿದೆ. ಅವುಗಳನ್ನು ಉದ್ದಿಮೆದಾರರ ಹೆಸರಿನಲ್ಲಿ ನೀಡಲಾಗುವುದಿಲ್ಲ. ಆದ್ದರಿಂದ ಉದ್ದಿಮೆದಾರರ ಹೆಸರುಗಳು ದೊರೆಯುವುದಿಲ್ಲ. ೧೯೫೩ ರಿಂದ ೧೯೬೫ರವರೆಗೆ ಕೊಟ್ಟಿರುವ ಕೈಗಾರಿಕೆಗಳ ಸಂಖ್ಯೆ ೨೪೦

ಇ) ೧೯೮೩ ರಿಂದ ೧೯೬೫ರಲ್ಲಿ ೨೧೦

ಈ) ಕೇಂದ್ರ ಸರ್ಕಾರದವರು ಸಾಮಾನ್ಯವಾಗಿ ಕೈಗಾರಿಕೆಗಳ / ಉದ್ದಿಮೆಗಳ ಹೆಸರಿನಲ್ಲಿ ಪರವಾನಿಗೆಗಳನ್ನು ನೀಡುತ್ತಿರುವುದರಿಂದ ಉದ್ದಿಮೆದಾರರ ಹೆಸರುಗಳ ಬಗ್ಗೆ ಮಾಹಿತಿ ಇರುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಮಂತ್ರಿಗಳು ಕೇಂದ್ರ ಸರ್ಕಾರದವರು ಲೈಸನ್ಸ್ ಕೊಡುತ್ತಾರೆಂದು ಹೇಳಿದರು ಆ ಬಗ್ಗೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ರೆಕಮೆಂಡ್ ಮಾಡದೇ ಇದ್ದರೆ ಅವರೇ ನೇರವಾಗಿ ಲೈಸನ್ಸನ್ನು ಕೊಡುವುದಿಲ್ಲ. ಸರ್ಕಾರದವರು ಇಂತಹವರಿಗೆ ಲೈಸನ್ಸ್ ಕೊಡಬೇಕೆಂದು ಶಿಫಾರಸ್ಸು ಮಾಡಿದರೆ ಮಾತ್ರ ಕೇಂದ್ರ ಸರ್ಕಾರ ಅಂತಹವರಿಗೆ ಲೈಸನ್ಸನ್ನು ಕೊಡುವುದು ಆ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕು.

ಶ್ರೀ ಜೆ. ಎಚ್. ಪಟೇಲ್.—ಹಾಗಲ್ಲ ಆದು. ಲಾರ್ಜ್ ಅಂಡ್ ಮೀಡಿಯಂ ಸ್ಕೇಲ್ ಕೈಗಾರಿಕೆಗಳನ್ನು ಮಾಡುವುದಕ್ಕೆ ಬಿ.ಜಿ.ಟಿ.ಡಿ.ಯವರು ಲೈಸನ್ಸನ್ನು ಕೊಡುತ್ತಾರೆ. ಕೈಗಾರಿಕಾ ಇಲಾಖೆಯವರೂ ಲೈಸನ್ಸನ್ನು ಕೊಡುತ್ತಾರೆ. ಆದರೆ ಆ ರೀತಿಯ ಲೈಸನ್ಸನ್ನು ಕೊಡುವಾಗ ಫರ್ಮ್ ಹೆಸರಿಗೆ ಕೊಡುತ್ತಾರೆ. ಆ ಫರ್ಮ್ ಮಾಲೀಕನ, ಅಥವಾ ಆ ಕಂಪನಿಯ ಮಾಲೀಕನ ಹೆಸರು ಏನು ಎಂಬುದನ್ನು ಗೊತ್ತಾಗುವುದಿಲ್ಲ.

ಶ್ರೀ ಡಿ. ಎ. ಚಿನ್ನಪ್ಪ.—ಕಂಪನಿಯ ಹೆಸರಿಗೆ ಲೈಸನ್ಸ್ ಕೊಡುತ್ತಾರೆಂದು ಮಾನ್ಯ ಮಂತ್ರಿಗಳು ತಿಳಿಸಿದರು. ಆ ಕಂಪನಿಯ ಹೆಸರುಗಳನ್ನಾದರೂ ಕೊಡಬಹುದಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಕಂಪನಿಯ ಹೆಸರು ಸುಮಾರು ೪೫೦ ಇವೆ. ಅದು ಬೇಕಾದ್ದು ಸದಸ್ಯರಿಗೆ ಬೇಕಿದ್ದರೆ ಒದಗಿಸುತ್ತೇನೆ.

ಪ್ರಶ್ನೆ ನಂ. ೬೨೯(೮೮೪) – ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೬೩೨(೧೩೫೩) – ಸದಸ್ಯರು ಗೈರು ಹಾಜರಿ.

ಪ್ರಶ್ನೆ ನಂ. ೬೩೪(೫೬೬) – ಸದಸ್ಯರು ಗೈರು ಹಾಜರಿ.